ಆ) ಹಾಗಿದ್ದಲ್ಲಿ ಸಮಿತಿಯು ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾತ್ರ ತಾಂತ್ರಿಕ ಕೋರ್ಸ್‌ಗಳನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರವು ಸಮಿತಿಯ ಶಿಫಾರಸ್ಸನ್ನು ಜಾರಿಗೊಳಿಸಲು ಒಪ್ಪಿದೆಯೇ?

ಈ) ಸಮಿತಿಯ ಶಿಫಾರಸ್ಸನ್ನು ಜಾರಿಗೊಳಿಸಲು ಬೇಕಾಗುವ ಹಣ ಎಷ್ಟು?

ಶ್ರೀ ಪ್ರಭಾಕರ್ ಎಸ್.ರಾಣೆ (ವಯಸ್ಕರ ಶಿಕ್ಷಣ ಸಚಿವರು) :

ಆ) ಹೌದು ಸಲ್ಲಿಸಿದೆ.

ಆ) ಹೌದು.

ಇ) ಹೌದು. ಸಮಿತಿಯ ಶಿಫಾರಸ್ಸಿನಂತೆ 1991-92 ನೇ ಸಾಲಿನಲ್ಲಿ 50 ವೃತ್ತಿ ಶಿಕ್ಷಣ ಕೋರ್ಸುಗಳನ್ನು ಗುರುತಿಸಲಾದ 15 ಕಸಬುಗಳಲ್ಲಿ, 33 ಇಂಜಿನಿಯರಿಂಗ್ ಕಾಲೇಜುಃ ಪಾಲಿಟೆಕ್ನಿಕ್‌ಗಳಲ್ಲಿ ಪ್ರಾರಂಭಿಸಲಾಗಿದೆ. 1992-93 ನೇ ಸಾಲಿನಲ್ಲಿ 51 ವೃತ್ತಿ ಶಿಕ್ಷಣ ಕೋರ್ಸುಗಳನ್ನು 34 ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್‌ಗಳಲ್ಲಿ ಪ್ರಾರಂಭಿಸಲಾಗಿದೆ.

ಈ) ಪ್ರತಿ ಕೋರ್ಸಿಗೆ ರೂ. 1,81,000-00

<u>ವಿಷಯ : ಬೆಂಗಳೂರು ಡೈರಿ ಏಜೆಂಟರ್ ಸಂಖ್ಯೆ.</u>

1065

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಬೆಂಗಳೂರು ನಗರದಲ್ಲಿರುವ ಬೆಂಗಳೂರು ಡೈರಿ ಏಜೆಂಟರ ಸಂಖ್ಯೆ.

ಆ) ಲೀಟರ್ ಅಥವಾ ಪ್ಯಾಕೆಟ್ ಒಂದಕ್ಕೆ ಅವರಿಗೆ ಕೊಡಲಾಗುತ್ತಿರುವ ಕಮಿಷನ್,

ಇ) ಕಮಿಷನ್ ದರವನ್ನು ಹೆಚ್ಚಿಸುವ ಬಗ್ಗೆ ಬೆಂಗಳೂರು ಡೇರಿ ಏಜೆಂಟರುಗಳಿಂದ ಯಾವುದಾದರೂ ಮನವಿಗಳು ಬಂದಿವೆಯೇ?

ಈ) ಸರ್ಕಾರವು ಕಮೀಷನ್ ದರವನ್ನು ಹೆಚ್ಚಿಸುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳು .

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಆ) 627

ಆ) ಲೀಟರೊಂದಕ್ಕೆ ರೂ. 0.12

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

<u>ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಶೌಚಾಲಯ ಮತ್ತು ಆಟದ ಮೈದಾನ.</u>

1186

ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ದಕ್ಷಿಣ ಕನ್ನಡ ಜಿಲ್ಲೆಯ ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ